ದಿನಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಬಂಟವಾಳ ತಾಲ್ಲೂಕಿನಲ್ಲಿ ಆಸ್ಪತ್ರೆಯನ್ನು ಮೇಲಕ್ಕೇರಿಸುವುದು

೧೪೯೧ ಶ್ರೀ ರಾಮನಾಥ ರೈ (ಬಂಟವಾಳ) ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗ ಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಟವಾಳ ತಾಲ್ಲೂಕಿನ ಆಸ್ಪತ್ರೆಯು ಸಣ್ಣ ಪ್ರಮಾಣದ ಆಸ್ಪತ್ರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಆಸ್ಪತ್ರೆಯನ್ನು ೧೦೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸಬೇಕೆಂದು ಈ ಹಿಂದೆಯೇ ಜನತೆಯು ಮನವಿ ಮಾಡಿರುವುದನ್ನು ಸರ್ಕಾರದವರು ಪರಿಗಣಿಸಿದ್ದಾರೆಯೇ?

ಇ) ಹಾಗಿದ್ದಲ್ಲಿ ಸರ್ಕಾರದವರು ತುರ್ತಾಗಿ ಜನತೆಯ ಈ ಕೋರಿಕೆಯನ್ನು ಈಡೇರಿಸಲು ಕ್ರಮ ಕೈಗೊಳ್ಳುವರೇ?

ಶ್ರೀ. ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು. ಇದು ೨೪ ಹಾಸಿಗೆಗಳ ಆಸ್ಪತ್ರೆಯಾಗಿದೆ.

ಆ) ಪರಿಗಣಿಸಲಾಗಿದೆ.

ಇ) ಈಗಿರುವ ೨೪ ಹಾಸಿಗೆಗಳ ಆಸ್ಪತ್ರೆಯನ್ನು ಸರ್ಕಾರದ ನೀತಿಯಂತೆ ೫೦ ಹಾಸಿಗೆಗಳಿಗೆ ಏರಿಸಲು ಸಾಕಷ್ಟು ಹಣ ದೊರೆತಾಗ ಕ್ರಮವನ್ನು ಕೈಗೊಳ್ಳಲಾಗುವುದು.

ಆಳಂದ ತಾಲ್ಲೂಕಿನಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳು

೧೪೯೨ ಶ್ರೀ ಜಿ. ರಾಮಕೃಷ್ಣ (ಕಮಲಾಪುರ) ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ನರೋಣ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಜೂರಾಗಿರುವ ವೈದ್ಯಾಧಿಕಾರಿಗಳ ಹುದ್ದೆಗಳೆಷ್ಟು?

ಆ) ಈ ಹುದ್ದೆಗಳನ್ನು ಎಂದು ಮಂಜೂರು ಮಾಡಲಾಯಿತು?

ಇ) ಈ ಹುದ್ದೆಗಳ ಪೈಕಿ ಎಷ್ಟು ಹುದ್ದೆಗಳಿಗೆ ವೈದ್ಯಾಧಿಕಾರಿಗಳನ್ನು ನೇಮಿಸಲಾಗಿದೆ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು?

ಈ) ಹುದ್ದೆಗಳು ಖಾಲಿ ಇದ್ದಲ್ಲಿ ಅವು ಎಂದಿನಿಂದ ಖಾಲಿ ಇವೆ ಮತ್ತು ಭರ್ತಿ ಮಾಡದಿರುವುದಕ್ಕೆ ಕಾರಣಗಳೇನು?

ಉ) ಖಾಲಿ ಇರುವ ಹುದ್ದೆಗಳನ್ನು ಸರ್ಕಾರದವರು ಈಗಲಾದರೂ ಭರ್ತಿ ಮಾಡಿ ಸುಮಾರು ಒಂದೂ ವರೆ ಲಕ್ಷ ಜನಸಂಖ್ಯೆ ಇರುವ ಈ ಆರೋಗ್ಯ ಕೇಂದ್ರವನ್ನು ಜನೋಪಯೋಗಿ ಆರೋಗ್ಯ ಕೇಂದ್ರವ ನ್ನಾಗಿ ಮಾಡಲು ಉದ್ದೇಶಿಸಿದೆಯೆ?

ಶ್ರೀ ಡಿ. ಬಿ. ಇನಾಮದಾರ, (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಸಚಿವರು)

ಅ) ಮೂರು

ಆ) ೧) ೧೯೫೬ರಲ್ಲಿ ಒಂದು ಮಹಿಳಾ ವೈದ್ಯರ ಹುದ್ದೆ

೨) ಏಪ್ರಿಲ್ ೧೯೬೩ರಲ್ಲಿ ಒಂದು ಪುರುಷರ ವೈದ್ಯರ ಹುದ್ದೆ

೩) ೩೦-೫-೧೯೬೩ರಲ್ಲಿ ಸಿ.ಹೆಚ್.ವಿ. ಯೋಜನೆಯಲ್ಲಿ ಒಂದು ಪುರುಷರ ವೈದ್ಯರ ಹುದ್ದೆ.

ಇ) ೧) ಒಬ್ಬರು ಪುರುಷ ವೈದ್ಯರು ಕರ್ತವ್ಯದ ಮೇಲಿದ್ದಾರೆ.

೨) ಎರಡು ಹುದ್ದೆ ಖಾಲಿ ಇವೆ.